# ನೆನಪಿಲ್ಲದವರೊಬ್ಬರ ನೆನಪಿನಲ್ಲಿ

"ರಾಮಪ್ಪಾ, ರಾಮಪ್ಪಾ?", ಇಪ್ಪತ್ತನೇ ಸಲ ಅಜ್ಜಿ ನನ್ನನ್ನು ಕರೆಯುತ್ತಿರುವುದು, ಇಪ್ಪತ್ತು ಸಲವೂ ಇಪ್ಪತ್ತು ಹೆಸರುಗಳಿಂದ ನನ್ನನ್ನು ಕರೆದಿದ್ದಾಳೆ, "ರಾಮಪ್ಪ, ರವಿ, ಶಂಕ್ರೂ, ಶರಣಪ್ಪ, ತಿಪ್ಪೇಸ್ವಾಮಿ, ಇವೆಲ್ಲ ಯಾರ ಹೆಸರುಗಳೋ, ಮಸುಕು ಮಸುಕಾದ ಯಾವ ನೆನಪಿನ ಚಿತ್ರಗಳೋ? ನನ್ನ ನಿಜವಾದ ಹೆಸರೊಂದನ್ನು ಬಿಟ್ಟು ಎಲ್ಲ ಹೆಸರನ್ನೂ ಕರೆದಿದ್ದಾಳೆ, ಭಗವಂತನ ಸಹಸ್ರ ನಾಮಾರ್ಚನೆಯಂತೆ. "ರಾಮಪ್ಪಾ, ಇದೀಯಾ?" ನಾನು ಉತ್ತರಿಸದ ಹೊರತು, ನಾಮಾರ್ಚನೆ ನಿಲ್ಲುವುದಿಲ್ಲ ಎಂದುಕೊಂಡು ಕೇಳುತಿದ್ದ ಟೇಪ್‌ರಿಕಾರ್ಡರ್ ವಾಲ್ಯೂಂ ಕಡಿಮೆ ಮಾಡಿ, ಬಳಿ ಹೋಗಿ ನಿಂತೆ, "ಏನಜ್ಜೀ?", "ಏನಿಲ್ಲಾ, ಎಲ್ಲಿ ಹೋದೆಯೋ ಅಂತ ಕರೆದೆ". ನಾನು ಬೇಸತ್ತು ಮೆಲ್ಲನೇ ನಕ್ಕುಬಿಟ್ಟೆ. ತೀರಾ ವಯಸ್ಸಾಗಿ ನಿತ್ರಾಣಗೊಂಡು ನಡುಗುವ ದೇಹ, ಸ್ವಲ್ಪವೇ ಉಳಿದಿರುವ ಕಣ್ಣದೃಷ್ಟಿ, ಅಗಾಧ ಮರೆವಿನಿಂದಾಗಿ ಈಕೆ ಒಂದು ಸಣ್ಣ ಮಗು ಅನಿಸಿಬಿಟ್ಟಿತ್ತು. ರಾತ್ರಿಯ ನಿದ್ದೆ ಮಾತ್ರೆಯ ಮಂಪರಿಳಿದು ಆಕೆಗೆ ಎಚ್ಚರಾಗುವ ಹೊತ್ತಿಗೆ ಮಧ್ಯಾಹ್ನ ಹನ್ನೆರಡು ಗಂಟೆ. "ಸುಶೀಲಾ", ಎಂದು ತನ್ನ ಮಗಳನ್ನು ಕರೆದಕೂಡಲೇ ನಾನು ಎದುರಿಗೆ ಹೋಗಿ ನಿಂತೆ, "ಅವರಿಲ್ಲ ಅಜ್ಜಿ, ರಾತ್ರೀನೇ ಬೆಂಗಳೂರಿಗೆ ಹೋದರಲ್ಲ, ಸುನೀಲ ತೀರ್ಕೊಂಡಿದಾನೆ ಅಂತ", "ಹೌದಾ? ಸುನೀಲು ಹೋಗಿಬಿಡ್ತಾ? ನನ್ನನ್ನು ಬಿಟ್ಟೇ ಹೋಗಿದಾರೆ, ನೀನ್ಯಾರಪ್ಪಾ?", "ನಾನು ಶೇಖರನ ಫ್ರೆಂಡು, ಚಿಕ್ಕಮಗಳೂರಿನಿಂದ ಬಂದಿದೀನಿ, ಶಿವು ಅಂತಾ.." ನಿನ್ನೆ ರಾತ್ರಿ ಅಜ್ಜಿಯ ಮಗಳು–ನನ್ನ ಸ್ನೇಹಿತ ಶೇಖರನ ತಾಯಿ ಹೇಳಿದ್ದ ವಿಷಯವೆಲ್ಲ ಮರೆತೇ ಹೋಗಿದೆ ಈ ಅಜ್ಜಿಗೆ ಅಂದುಕೊಂಡು, "ಈವತ್ತು ನಾವಿಬ್ರೇ ಮನೆಯಲ್ಲಿ. ಮುಖ ತೊಳ್ಕೊಳಿ, ತಿಂಡಿ ತಿನ್ನುವಿರಂತೆ", ಅಂದೆ. "ಇವತ್ತು ಶುಕ್ರವಾರವಲ್ವೇ, ತಲೆಗೆ ನೀರುಹಾಕ್ಕೋಬೇಕು" ಅಂದರು. ಎಲ್ಲ ಮರೆತರೂ ಈ ದಿನ–ಕಾಲಗಳ ನೆನಪು ಅಜ್ಜಿಗೆ ಇದೆಯಲ್ಲ ಎಂದುಕೊಳ್ಳುತ್ತಲೇ ಸ್ನಾನಕ್ಕೆ ನೀರು ಕಾಯಿಸಿದೆ...

ನಾನು ಈ ಊರಿಗೆ ಬಂದು ನಾಲ್ಕು ದಿನವಾಯ್ತು. ಇದು ನನ್ನ ಸ್ನೇಹಿತ, ನಮ್ಮ ಮನೆಯಲ್ಲಿ ಪೇಯಿಂಗ್ ಗೆಸ್ಟ್ ಆಗಿದ್ದ ಶೇಖರನ ಮನೆ, ಅವರಪ್ಪ ಈ ಊರಿನ ಸಿಮೆಂಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತಿದ್ದಾರೆ, ಸಾಲಾಗಿ ಕಟ್ಟಿರುವ ಕ್ವಾರ್ಟರ್ಸ್‌ಗಳು, ಪಾರ್ಕು, ಸಮುದಾಯ ಭವನ, ಆಟದ ಮೈದಾನ, ಆಸ್ಪತ್ರೆ, ಇವನ ಬಾಲ್ಯದ ಸ್ನೇಹಿತರು, ಸಿಮೆಂಟ್ ಫ್ಯಾಕ್ಟರಿಯ ಈ ಸ್ಯಾಟಲೈಟ್ ಟೌನಿನಲ್ಲಿ ಮೂರುದಿನ ಕಳೆದದ್ದೇ ಗೊತ್ತಾಗಲಿಲ್ಲ. ಆದರೆ ಆ ಮೂರುದಿನವೂ ಶೇಖರ ಒಂದೇ ಒತ್ತಾಯ ಮಾಡಿದ್ದ, "ಬೆಂಗಳೂರಿಗೆ ಹೋಗೋಣ ಬಾ, ನನ್ನ ಕಸಿನ್‌ನ ನೋಡೋಹಾಗಾಗಿದೆ" ನಾನು ಕಡ್ಡಿ ತುಂಡುಮಾಡಿದ ಹಾಗೆ ಹೇಳಿದ್ದೆ,"ಬೇಡ, ನಾನು ಬಂದಿರೋದು ನಿಮ್ಮೂರಿಗೆ ಅಂತಾ. ನೀನು ಬೇಕಾದರೆ ಹೋಗು, ಆಂಟಿ, ಅಂಕಲ್, ನಿನ್ನ ತಮ್ಮ ಎಲ್ಲರೂ ಇದ್ದಾರಲ್ಲ, ಒಂದ್ವಾರ ಇದ್ದು ವಾಪಸ್ಸು ಹೋಗಿಬಿಡ್ತೀನಿ". ನನ್ನ ಮಾತು ಕೇಳಿ ಅವನು ಬೆಂಗಳೂರಿಗೆ ಹೋಗಿದಿದ್ದರೆ ಚೆನ್ನಾಗಿತ್ತೇನೋ, ಆದರೆ ಅವನು "ಇರ್ಲಿ ಬಿಡು, ನಾನೂ ಇರ್ತೀನಿ, ನೀನು ಊರಿಗೆ ಹೋದಮೇಲೇ ಹೋಗ್ತೀನಿ" ಅಂದಿದ್ದ. ನಿನ್ನೆ ರಾತ್ರಿ ಎಲ್ಲರೂ ಟೀವಿಮುಂದೆ ಕುಳಿತಿದ್ದಾಗ ಫೋನು ಬಂದೇ ಬಿಟ್ಟಿತಲ್ಲ,"ಸುನೀಲ ಹೋಗಿಬಿಟ್ಟ!"

ಸುನೀಲ, ನನ್ನ ಗೆಳೆಯನ ಮುದ್ದಿನ ಕಸಿನ್, ನಾಲ್ಕುವರೆ ವರ್ಷದ ಪುಟ್ಟ ಕೂಸು, ಇವನ ಎಷ್ಟೋ ಕತೆಗಳ, ಸಂಗತಿಗಳ ಕೇಂದ್ರಬಿಂದು ತೀರಿಕೊಂಡಿದ್ದ. ಹುಟ್ಟುವಾಗಲೇ ರಕ್ತದ ಕ್ಯಾನ್ಸರಿನ ವ್ಯಾಧಿಯನ್ನಂಟಿಸಿಕೊಂಡೇ ಹುಟ್ಟಿದ ಸುನೀಲ ತೀರಿಕೊಂಡ ಸುದ್ದಿಕೇಳಿ ಇವರೆಲ್ಲರೂ ಬೆಂಗಳೂರಿಗೆ ಹೊರಟು ನಿಂತರು. ನಾನೇ ಅವರನ್ನೊಪ್ಪಿಸಿ ಅಜ್ಜಿಯನ್ನು ಒಂದು ದಿನದ ಮಟ್ಟಿಗೆ ನೋಡಿಕೊಳ್ಳುವುದಾಗಿ ಹೇಳಿದೆ. ಶೇಖರನ ತಾಯಿ ಕ್ಲುಪ್ತವಾಗಿ ಅಜ್ಜಿಗೆ ವಿಷಯ ತಿಳಿಸಿದರು, ಆಕೆಗೆ ನಿದ್ರೆಯ ಮಂಪರಿನಲ್ಲಿ ಎಷ್ಟು ಅರ್ಥವಾಯಿತೋ? ನನಗೆ ಬೆಳಗಿನ ತಿಂಡಿಗೆಂದು ರುಬ್ಬಿಟ್ಟಿದ್ದ ದೋಸೆ ಹಿಟ್ಟು, ಹೆಚ್ಚಿಟ್ಟಿದ್ದ ತರಕಾರಿಗಳ ಬಗ್ಗೆಯೆಲ್ಲ ತಿಳಿಸಿಹೇಳಿ, ಅಜ್ಜಿಗೆ ನಾಳೆ ಸ್ನಾನ ಬೇಡಾಂತ ಹೇಳಿಬಿಡು, ಆಕೆ ಮಧ್ಯಾಹ್ನದ ತನಕ ಎದ್ದೇಳುವುದಿಲ್ಲವೆಂದು ಹೇಳಿ ಹೊರಟು ಬಿಟ್ಟರು, ನನಗೆ ನನ್ನ ಸ್ನೇಹಿತನ ಮುಖ ನೋಡುವ ಧೈರ್ಯವಾಗಲಿಲ್ಲ.

ಅಜ್ಜಿಗೆ ನಾನು ಬಂದಾಗಿನಿಂದ, ಶೇಖರ, ಅವರಮ್ಮ, ಅಪ್ಪ, ನನ್ನನ್ನು ಹತ್ತತ್ತು ಸಲ ಪರಿಚಯಮಾಡಿಕೊಟ್ಟಿದ್ದರೂ, ಅಜ್ಜಿ ನನ್ನನ್ನು ಮರೆಯುತ್ತಲೇ ಇದ್ದರು, ಮತ್ತು ಅಪ್ಪಿತಪ್ಪಿಯೂ ನನ್ನ ನಿಜವಾದ ಹೆಸರನ್ನು ಕರೆಯಲಿಲ್ಲ! 'ಭೀಮಪ್ಪ, ಶ್ಯಾಮೂ, ನಂಜೇಗೌಡ, ನಾಗೂ', ಅವೆಷ್ಟು ಹೆಸರುಗಳು, ಅವೆಷ್ಟು ನೆನಪುಗಳು... ಆಕೆಯ ಪ್ರತಿಯೊಂದು ಪ್ರಶ್ನೆಗಳಿಗೂ ಸ್ಪಷ್ಟವಾಗಿ ಉತ್ತರಿಸುತ್ತ ಗೀಸರ್‌ನಲ್ಲಿ ನೀರು ಕಾಯಿಸಿ, ಮೆಲ್ಲನೇ ಅಜ್ಜಿಯ ಭುಜಕ್ಕೆ ಕೈಹಾಕಿ ಕರೆದುಕೊಂಡು ಹೋಗಿ, ಬಚ್ಚಲಿನಲ್ಲಿ ಕೂರಿಸಿದೆ, ಸದಾ ಮಲಗೇ ಇರುವುದರಿಂದ ಗಂಟು ಗಂಟಾಗಿದ್ದ ಬಿಳಿಕೂದಲ ಜಡೆ ಬಿಡಿಸಿ ನೀರು ಹಾಕಿದೆ, ಸ್ನಾನಮಾಡಿಸಿ ತಲೆಗೂದಲಿಗೆ ಲೋಬಾನ ಹಾಕಿ ಒಣಗಿಸಿ, ಬಿಸಿ ಬಿಸಿ ದೋಸೆ ಮಾಡಿಕೊಟ್ಟೆ. "ಸುಶೀಲ ಯಾವಾಗಲೂ ಬೆಳಿಗ್ಗೆ ಬರೀ ಅನ್ನ ಸಾರು ಮಾಡ್ತಿದ್ಲು" ಅಂದರು, ಅಜ್ಜಿಯ ಬೆಳಿಗ್ಗೆ–ನಮ್ಮೆಲ್ಲರ ಮಧ್ಯಾಹ್ನ ಅಂದುಕೊಂಡು ಸುಮ್ಮನಾದೆ. ಅಜ್ಜಿ ಮಲಗಿಕೊಂಡರು, ಬಂದ ಶೇಖರನ ಸ್ನೇಹಿತರೊಂದಿಗೆ ಕೇರಂ ಆಡಿದೆ. ಅಜ್ಜಿ ಎದ್ದಕೂಡಲೇ ಸ್ನೇಹಿತರೆಲ್ಲ ಹೊರಟುಬಿಟ್ಟರು, ಅಜ್ಜಿಯ ಬಯಕೆಯಂತೆ ಹಿತ್ತಲಿನಲ್ಲಿ ಕುಳಿತು, ತಲೆಗೆ ಎಣ್ಣೆಹಾಕಿ, ಬಾಚಿ ಜಡೆಕಟ್ಟಿದೆ, ಪ್ರತೀ ಮಾತಿಗೂ ಹೂಂಗುಟ್ಟುತ್ತ, ಉತ್ತರಗಳಿಗಿಂತ ಕೇಳಿದ ಪ್ರಶ್ನೆಗಳನ್ನೇ ಕೇಳುತ್ತ ಕುಳಿತ ಅಜ್ಜಿ ಚಿಕ್ಕ ಮಗುವಾದಳು. ಆಮೇಲೆ ನಾನೇ ಇಷ್ಟಪಟ್ಟು, ಆಕೆಗೆ ರಾಮಾಯಣದ

ಅರಣ್ಯಕಾಂಡವನ್ನು ಓದಿ ಹೇಳಿದೆ. ನನ್ನ ಓದು ಮುಗಿದಾಗ, ಆಕೆ ನಿದ್ದೆಹೋಗಿದ್ದಳು.ಮೆಲ್ಲನೇ ಟೇಪ್‌ರಿಕಾರ್ಡರ್ ಹಾಕಿಕೊಂಡು ಕುಳಿತೆ...

ಮರೆವು ಎಂತಹ ರೋಗ, ಕೆಲವೊಮ್ಮೆ ಎಂತಹ ವರದಾನ. ಅಜ್ಜಿಯ ನೆನಪುಗಳ ಸಾಗರದಲ್ಲಿ ಭೋರ್ಗರೆಯುವ ಅಲೆಗಳಿಗೆ ಈಗ ನಿಮಿತ್ತವಿಲ್ಲ, ಅವು ಅರಿವಿನ ದಡ ಮುಟ್ಟುವುದೇ ಇಲ್ಲ, ನಮಗೆಲ್ಲ ಆಕೆಯ ಮಾತುಗಳಲ್ಲಿ ಅರ್ಥವಿಲ್ಲ ಆಕೆಯ ನೆನಪುಗಳೊಳಕ್ಕೆ ನಮಗೆ ಪ್ರವೇಶವಿಲ್ಲ. ಬಹುಶಃ ಆಕೆಯಲ್ಲಿ ಹೊಸ ನೆನಪುಗಳೂ ಹುಟ್ಟುವುದಿಲ್ಲ, ಜಮೆಯಾಗುವುದಿಲ್ಲ. she can't aquire new memories now.. ನೆನಪುಗಳನ್ನು ಹುಟ್ಟಿಸದಾದಾಗ ನಾವು ಹಳೆಯ ನೆನಪುಗಳಲ್ಲೇ ಬದುಕಲಾರಂಭಿಸುತ್ತೇವೆ, ಅವನ್ನೇ ಬದುಕಲು ಶುರುಮಾಡುತ್ತೇವೆ, ಹಾಗಾಗಿ ವೃದ್ಧಾಪ್ಯದಲ್ಲಿ ನಮ್ಮ ಜೀವನವನ್ನು ವಾಪಸ್ಸು ಉಲ್ಟಾ ಬದುಕಲು ಶುರುಮಾಡುತ್ತೇವೆ, ಹಳೆಯ ನೆನಪುಗಳನ್ನೇ ಹಿಡಿದುಕೊಂಡು, ಬಾಲ್ಯಕ್ಕೂ ಹೋಗಿಬಿಡುತ್ತೇವೆ, ಅದಕ್ಕೇ ಮುದುಕರೂ, ಸಣ್ಣಮಕ್ಕಳೂ ಒಂದೇ ಎನ್ನುವುದು (ನನ್ನ ಸ್ವಂತ ಅಜ್ಜಿಯೂ ರಾತ್ರಿಯ ನಿದ್ದೆಯಲ್ಲಿ ಸೋಬಾನೆಯಂತ ಹಾಡೊಂದನ್ನು ಗುನುಗುತಿದ್ದಳು, ಜೀವನವಿಡೀ ಆಕೆ ಹಾಡಿದ್ದನ್ನು ನೋಡಿರದಿದ್ದ ನಾವು ಆಕೆಗೆ ಎಚ್ಚರಾದಾಗ ಕೇಳಿದರೆ, ಆಕೆಗೆ ಏನೂ ನೆನಪಿರುತ್ತಿರಲಿಲ್ಲ) ಮತ್ತು ಬಹುಶಃ ಬಾಲ್ಯವನ್ನು ಮತ್ತೊಮ್ಮೆ ಬದುಕಿಯಾದ ಮೇಲೆಯೇ ಅವರು ಮಹಾಪ್ರಸ್ಥಾನದ ಹಾದಿಹಿಡಿಯುವುದು...

ಆ ರಾತ್ರಿ ನನ್ನ ಸ್ನೇಹಿತನ ಅಮ್ಮ ಅಪ್ಪ, ತಮ್ಮ ವಾಪಸ್ಸು ಬಂದರು, ಅಜ್ಜಿ ನನ್ನನ್ನು(ಹೊಸ ಹೆಸರುಗಳನ್ನು ಹೇಳಿ) ಹೊಗಳಿದ್ದೇ ಹೊಗಳಿದ್ದು, ಶೇಖರ ಬೆಂಗಳೂರಿನಲ್ಲೇ ವಾಪಸ್ಸು ಉಳಿದಿದ್ದ. ನಾನು ಒಂದುವಾರವಿದ್ದು ನಮ್ಮೂರಿಗೆ ವಾಪಸ್ಸು ಬಂದೆ. ಕಾಲೇಜು ಶುರುವಾಗಿ ಒಂದು ವಾರದ ಮೇಲೆ ಶೇಖರ ಮನೆಗೆ ಬಂದ. ನನ್ನ ಮೇಲೆ ಅವನಿಗೆ ತೀರಲಾರದ ಸಿಟ್ಟು ಹುಟ್ಟಿಬಿಟ್ಟಿತ್ತು. ಸೆಮಿಸ್ಟರ್‌ನ ಕೊನೆಯಲ್ಲಿ ಹೊರಟು ನಿಂತವನು ನನ್ನನ್ನು ಮನೆಗೆ ಕರೆಯಲೂ ಇಲ್ಲ. ನಾನಾಗೇ 'ಅಜ್ಜಿಯನ್ನು ನೋಡುವಂತಾಗಿದೆ' ಎಂಬ ನೇರವಾಗೇ ಕೇಳಿದರೂ 'ನನ್ನ್ಯಾವ ಸ್ನೇಹಿತರನ್ನೂ ನನ್ನ ಮನೆಗೆ ಕರೆಯುವುದಿಲ್ಲ ಅಂತ ತೀರ್ಮಾನ ಮಾಡಿದೀನಿ' ಅಂದು ಬಿಟ್ಟ! ಅದರ ನಂತರದ ಸೆಮಿಸ್ಟರ್‌ನಲ್ಲಿ ನಮ್ಮ ಮನೆಬಿಟ್ಟು ತನ್ನ ಸ್ನೇಹಿತರೊಡನೆ ಬೇರೆ ರೂಮ್ ಮಾಡಿದ...

ಮತ್ತ್ಯಾವಾಗಲೋ ಮನೆಗೆ ಬಂದಿದ್ದವನು, ಅಜ್ಜಿ ತೀರಿಕೊಂಡ ವಿಷಯ ಹೇಳಿದ. ನಾನಂದು ಕೊಂಡಂತೆ ಆಕೆ ತನ್ನ ಬಾಲ್ಯವನ್ನು ಮತ್ತೊಮ್ಮೆ ಬದುಕಿ ಮುಗಿಸಿ, ಹುಟ್ಟಿನ ವಿರುದ್ಧ ದಡವಾದ ಸಾವಿನೊಳಕ್ಕೆ ನಡೆದುಹೋಗಿರಬೇಕು, ಸಾಯುವುದಕ್ಕಿಂತ ಮೊದಲು ಅಜ್ಜಿ ತೀರಾ ಮಗುವೇ ಆಗಿಬಿಟ್ಟಿದ್ದಳಂತೆ.

ಮತ್ತು ಪದೇ ಪದೇ ನನ್ನನ್ನೂ ನೆನಪಿಸಿಕೊಂಡಳಂತೆ...

ಯಾವ ಹೆಸರಿನಿಂದ ನನ್ನನ್ನು ನೆನಪಿಸಿಕೊಂಡಳು ಅಂತ ಮಾತ್ರ ನಾನು ಕೇಳಲು ಹೋಗಲಿಲ್ಲ...